ಕಾಮಗಾರಿಗಳ ದುರಸ್ಥಿಗೆ ಅಗತ್ಯವಿರುವ ಹಣವನ್ನು ಪ್ರಕೃತಿ ವಿಕೋಪ ಪರಿಹಾ ನಿಧಿಯಿಂದ ಭರಿಸಲು ಮತ್ತು ಇನ್ನುಳಿದ ಎರಡು ವರ್ಗಗಳ ಕಾಮಗಾರಿಗಳನ ಆಯಾ ಇಲಾಖಾ ಆಯವ್ಯಯದಡಿಯಲ್ಲಿ ಒದಗಿಸಿರುವ ಅನುದಾನದಲ್ಲಿ ಕೈಗೊಳ್ಳಬೇಕೆಂದ ನಿರ್ಧರಿಸಲಾಗಿದ್ದು, ಆರ್ಥಿಕ ಇಲಾಖೆಯ ಮುಖಾಂತರ ಈ ಹಣವನ್ನು ಸಂಬಂಧಪಟ್ಟ ಕಾಮಗಾರಿಗಳ ದುರಸ್ಥಿಗಾಗಿ ಬಿಡುಗಡೆ ಮಾಡಲಾಗುವುದು.

**8. ಬೆಳಗಾಂ ಜಿಲ್ಲೆ ಸೌದತ್ತಿ ತಾಲ್ಲೂಕಿನ ಹಲವು ಗ್ರಾಮಗಳಲ್ಲಿ ಲೋ-ವೋಲ್ಟೇಜ ಬರುತ್ತಿರುವುದರಿಂದ ಐ.ಪಿ. ಸೆಟ್ಟುಗಳು ಸುಡುತ್ತಿರುವುದರ ಬಗ್ಗೆ.**

ಶ್ರೀ ಶಿವಾನಂದ ಹೆಚ್. ಕೌಜಲಗಿ : (ಬೈಲಹೊಂಗಲ) : ಮಾನ್ಯ ಅಧ್ಯಕ್ಷರೇ ಬೆಳಗಾಂ ಜಿಲ್ಲೆ ಸೌದತ್ತಿ ತಾಲ್ಲೂಕಿನ ಮರಕುಂಬಿ, ಇಂಚಲ, ಹಾಗೂ ಹಾರಗೊಪ್ಪ ಮತ್ತು ಚಚ್ಚಡಿ ಗ್ರಾಮಗಳಲ್ಲಿ ಲೋವೋಲ್ಟೇಜ್ ಬರುತ್ತಿರುತ್ತದೆ. ಇದರಿಂದ ಐ.ಪಿ ಸೆಟ್ಟುಗಳು ಸುಡಲಿಕ್ಕೆ ಹತ್ತಿರುತ್ತವೆ. ಇದಲ್ಲದೆ, ಒಂದೊಂದು ದಿವಸ ಸಂಪೂರ್ಣವಾಗಿ ವಿದ್ಯುತ್ ಇರುವುದಿಲ್ಲ. ಇದೂ ಅಲ್ಲದೆ, ಅಲ್ಲಿ ಎಷ್ಟೋ 63 ಕೆ.ವಿ. ಟ್ರಾನ್ಸ್ಫಾರ್ಮರ್ ಗಳು ಬೇಕಾಗಿದ್ದರೂ ಇನ್ನೂವರೆಗೂ ಬೆಂಗಳೂರಿನಿಂದ ಸಪ್ಲೈ ಮಾಡಿರುವುದಿಲ್ಲ. 25 ಕೆ.ವಿ. ಟ್ರಾನ್ಸ್ಫಾರ್ಮರಗಳ ಮೇಲೆ ಐ.ಪಿ.ಸೆಟ್ಟುಗಳ ಲೋಡು ಹೆಚ್ಚು ಬಿದ್ದು ಅವುಗಳು ಮೇಲಿಂದ ಮೇಲೆ ಸುಡಲಿಕ್ಕೆ ಹತ್ತಿರುತ್ತವೆ. ಹೀಗಾಗಿ, ರೈತರು ಬೆಳೆದ ಪೀಕಿಗೆ ನೀರು ಇಲ್ಲದಂತಾಗಿ ಲಕ್ಷಾಂತರ ರೂ.ಹಾಳಾಗಿ ಹೋಗಲಿಕ್ಕೆ ಹತ್ತಿರುತ್ತದೆ. ಅದೂ ಅಲ್ಲದೆ ಕುಡಿಯುವ ನೀರಿನ ತೊಂದರೆ ಆಗಲಿಕ್ಕೆ ಹತ್ತಿರುತ್ತದೆ.

ಕೆ.ಇ.ಬಿ. ಅಧ್ಯಕ್ಷರವರು ಜಿಲ್ಲಾ ಮಂತ್ರಿ ಕರೆದ ಮೀಟಿಂಗ್‌ನಲ್ಲಿ ಬೈಲಹೊಂಗಲಕ್ಕೆ ಬೆಂಗಳೂರಿನಿಂದ ಟ್ರಾನ್ಸ್ಫಾರ್ಮರ್ ಹಾಗೂ ಉಳಿದ ಸಾಮಾನುಗಳನ್ನು ಕಳಿಸುವುದಾಗಿ ಆಶ್ವಾಸನೆ ನೀಡಿದ್ದರು. ಆದರೆ ಆಶ್ವಾಸನೆಯ ಪ್ರಕಾರ ಇನ್ನೂವರೆಗೂ ಯಾವುದೇ ಟ್ರಾನ್ಸ್ಫಾರ್ಮರ್‌ಗಳನ್ನು ಕಳಿಸಿರುವುದಿಲ್ಲ. ಆದಕಾರಣ ಕೂಡಲೇ ಇಲ್ಲಿ ಟ್ರಾನ್ಸ್ಫಾರ್ಮರ್ ಒದಗಿಸುವುದಾಗಬೇಕು ಮತ್ತು ರೈತರಿಗೆ ವಿದ್ಯುತ್‌ನ್ನು ಒಳ್ಳೆಯ ಪ್ರಮಾಣದಲ್ಲಿ ಒದಗಿಸುವುದಾಗಿ ಬೇಕೆಂದು ನಾನು ಈ ಮೂಲಕ ಮಾನ್ಯ ಉಪ-ಮುಖ್ಯ ಮಂತ್ರಿಗಳು ಹಾಗೂ ವಿದ್ಯುತ್ ಮಂತ್ರಿಗಳಲ್ಲಿ ಕೋರುತ್ತೇನೆ.

1.50 ಪಿ.ಎಂ

Sri K.A. Nisar Ahmed (Minister of State For Power)

The low voltage condition prevailing in Marakumbi, Inchala, Haragoppa and Chachadi villages of Soundatti Taluk in Belgaum Dist. has came to the notice of the Board. These villages are getting power supply from 33/11 KV sub-station at Mallur and are far away from the above -station. The power supply is fed through lengthy 11 kv feeder and this is the main reason for the low voltage condition.

To improve the voltage condition in the above villages, it is proposed to install a voltage regulator at Marakumbi village. This work will be executed, as early as possible. Further, due to failure of one No. of 100 MVA power transformer at 220/110 KV receiving station in Hubli,there is low voltage condition prevailing in the entire district of Belgaum to some extent. A new 100 MVA power transformer at 220/110 KV receiving station in Hubli is being installed in place of failed 100 MVA poer transformer and this work

progressing at a faster rate. This power transformer will commissioned very shortly.

During the period from April 93 to January 1994, seventy six numbers 25 KVA, fifty four numbers of 63 KVA and twenty eight number of 100 KVA distribution transformers have been supplied to Bailhongal division from Bangalore. During the same period, 72 Kms of Squirrel conductor, 140 Nos. of Veasel conductors were also supplied. Taking into consideration the requirment of this division, action will be taken to supply more numbers of distribution transformers and other essential materials.

ಶ್ರೀ ವಾಟಾಳ್ ನಾಗರಾಜ್ : ಮಂತ್ರಿಗಳು ಇಂಗ್ಲೀಷ್‌ನಲ್ಲಿ ಮಾತನಾಡುತ್ತಿದ್ದಾರೆ. ಮಂತ್ರಿಗಳೇ ಹೀಗೆ ದಾರಿ ತಪ್ಪಿದರೆ ಹೇಗೆ?

ಅಧ್ಯಕ್ಷರು : ಅವರು ಉತ್ತರವನ್ನು ಕನ್ನಡದಲ್ಲಿ ಓದಗಿಸಿದ್ದಾರೆ.

ಪ್ರೊ. ಎಂ.ಡಿ. ನಂಜುಂಡಸ್ವಾಮಿ : ಅವರು ಯಾವ ಭಾಷೆಯಲ್ಲಿ ಹೇಳುತ್ತಿದ್ದಾರೆಂದು ನನಗೆ ಅರ್ಥವಾಗುತ್ತಾ ಇಲ್ಲ.

ಶ್ರೀ ವಾಟಾಳ್ ನಾಗರಾಜ್ : ಅವರು ಯಾವ ಭಾಷೆಯಲ್ಲಿ ಯಾರಿಗೆ ಹೇಳುತ್ತಿದ್ದಾರೆ. ಮಾನ್ಯ ಕೌಜಲಗಿಯವರು ಕನ್ನಡದಲ್ಲಿ ಸ್ಪಷ್ಟವಾಗಿ ಕೇಳಿದ್ದಾರೆ.

ಶ್ರೀ ಶಿವಾನಂದ ಹೆಚ್. ಕೌಜಲಗಿ : ಗವರ್ನರ್ ಓದಿದ ಹಾಗೆ ಓದುತ್ತಿದ್ದಾರೆ.

ಶ್ರೀ ಕೆ. ಎ. ನಿಸಾರ್ ಅಹಮದ್ : ಕನ್ನಡ ಕಲಿಯುತ್ತಿದ್ದೇನೆ. ಕನ್ನಡದಲ್ಲಿ ಎದಲು ಸ್ವಲ್ಪ ನಿಧಾನವಾಗುತ್ತದೆ. ಮುಂದೆ ಕನ್ನಡದಲ್ಲಿ ಓದುತ್ತೇನೆ.

ಅಧ್ಯಕ್ಷರು : ಸಭೆಯು ಈಗ ಎದ್ದು 3 ಗಂಟೆಗೆ ಮತ್ತೆ ಸೇರುತ್ತದೆ.

(ಸಭೆಯು ಪುನಃ 3.30ಕ್ಕೆ ಸಮಾವೇಶಗೊಂಡಿತು)

(ಅಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ಶ್ರೀ ಬಿ.ಹೆಚ್. ಬನ್ನಿಕೋಡ್ : ಸನ್ಮಾನ್ಯ ಅಧ್ಯಕ್ಷರೆ, ನಿನ್ನೆ ನಾನು ಒಂದು ಎಲುವಳಿ ಸೂಚನೆ ಕಳಿಸಿದ್ದ. ಇಂದು ಉತ್ತರ ಕೊಡುತ್ತೇವೆಂದು ಹೇಳಿದ್ದರು. ಅದರಂತೆ ಇಂದು ಉತ್ತರ ಕೊಡಬೇಕು.

## ಮುಖ್ಯಮಂತ್ರಿಗಳ ಹೇಳಿಕೆ

ದಿನಾಂಕ 12-2-94ರಂದು ವಾಲ್ಮೀಕಿ ಜಯಂತಿ ಉತ್ಸವದ ನಿಮಿತ್ತ ಮುಖ್ಯಮಂತ್ರಿಗಳ ಕಾರ್ಯಕ್ರಮದ ಕಾಲಕ್ಕೆ ಕಟ್ಟದ ಕುಸಿದುದ್ದರಿಂದ ಉಂಟಾದ ಅನಾಹುತದ ಬಗ್ಗೆ.

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ತಾವು ಅನುಮತಿ ಕೊಟ್ಟರೆ ಈ ಕೆಳಕಂಡ ಹೇಳಿಕೆಯನ್ನು ನೀಡುತ್ತೇನೆ.

ಅಧ್ಯಕ್ಷರು : ಆಗಬಹುದು.

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ಹಿರೇಕೆರೂರು ಪಟ್ಟಣದಲ್ಲಿ ದಿನಾಂಕ 12.2.1994 ರಂದು ಮಹರ್ಷಿ ವಾಲ್ಮೀಕಿ ಜಯಂತಿ ಮತ್ತು ಕರ್ನಾಟಕ ರಾಜ್ಯ ವಾಲ್ಮೀಕಿ ಸಮಾಜದ ಸಮ್ಮೇಳನದ ಕಾರ್ಯಕ್ರಮದಲ್ಲಿ